# ಕನ್ನಡ ಸಾಹಿತ್ಯ ಪರಿಷತ್ತು

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ೨೬೫೨೩೮೬೭
http://www.kasapa.in e-mail : kannadaparishattu@gmail.com

ಕ್ರಮಸಂಖ್ಯೆ : ಕಸಾಪ / **ಪ್ರಕಟಣೆ**/ ೨೦೨೩–೨೪ ದಿನಾಂಕ : ೦೩–೧೧–೨೦೨೩

*ಇವರಿಗೆ*
**ಸಂಪಾದಕರು / ಮುಖ್ಯ ವರದಿಗಾರರು**
..................................................ಬೆಂಗಳೂರು

## ಪತ್ರಿಕಾ ಪ್ರಕಟಣೆ

# ದೇಶ ಕಂಡ ಅತ್ಯುತ್ತಮ ನ್ಯಾಯಧೀಶರು ಡಾ.ಶಿವರಾಜ್ ಪಾಟೀಲ್ ಭಾರತ ರತ್ನ ಡಾ.ಸಿ.ಎನ್.ಆರ್.ರಾವ್ ಬಣ್ಣನೆ

**ಬೆಂಗಳೂರು**: ಡಾ.ಶಿವರಾಜ ಪಾಟೀಲರು ದೇಶಕಂಡ ಅತ್ಯುತ್ತಮ ನ್ಯಾಯಾಧೀಶರಲ್ಲಿ ಒಬ್ಬರಾಗಿದ್ದು ಅವರಿಗೆ ಪ್ರಶಸ್ತಿ ಸಲ್ಲುತ್ತಿರುವುದು ಸೂಕ್ತವಾಗಿದೆ ಎಂದು ಹೇಳಿ ತಮ್ಮ ಆತ್ಮಕತೆ 'ಲೈಫ್ ಇಸ್ ಎ ಸೈನ್ಸ್' ಕೃತಿಯನ್ನು ಡಾ.ಶಿವರಾಜ ಪಾಟೀಲರೇ ಬಿಡುಗಡೆ ಮಾಡಿದ್ದರು ಎಂದು ಜಗತ್ತು ಕಂಡ ಶ್ರೇಷ್ಠ ವಿಜ್ಞಾನಿ ಭಾರತ ರತ್ನ ಡಾ.ಸಿ.ಎನ್.ಆರ್.ರಾವ್ ವರ್ಣಿಸಿದರು ಅವರು ಇಂದು ಜಕ್ಕೂರಿನ ಜವಹರಲಾಲ್ ನೆಹರೂ ಉನ್ನತ ವಿಜ್ಞಾನ ಸಂಶೋಧನಾ ಕೇಂದ್ರದ 'ನೆವಿಲ್ ಮೋಟ್ ಹಾಲಿ'ನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ ಕೆಂಗಲ್ ಹನುಮಂತಯ್ಯ ಸಂಸ್ಕೃತಿ ದತ್ತಿ ಪ್ರಶಸ್ತಿಯನ್ನು ನ್ಯಾಯಮೂರ್ತಿ ಡಾ.ಶಿವರಾಜ್ ಪಾಟೀಲರಿಗೆ ಪ್ರದಾನ ಮಾಡಿ ಮಾತನಾಡುತ್ತಿದ್ದರು. ನಾಲ್ವಡಿಯವರು ಸ್ಥಾಪಿಸಿ ಸರ್.ಎಂ.ವಿಯವರು ಬೆಂಬಲವಾಗಿ ನಿಂತ ಬಿ.ಎಂ.ಶ್ರೀಕಂಠಯ್ಯನವರಂತಹ ಕನ್ನಡದ ಕಟ್ಟಾಳುಗಳು ಕಟ್ಟಿದ ೧೦೮ ವರ್ಷಗಳ ಇತಿಹಾಸವುಳ್ಳ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಸಾಂಸ್ಕೃತಿಕ ಪ್ರತಿನಿಧಿಯಾಗಿದ್ದು. ಈ ಸಂಸ್ಥೆಯು ನೀಡಿವ ಪುರಸ್ಕಾರಗಳಿಗೆ ವಿಶೇಷ ಮಹತ್ವವಿದೆ ಕನ್ನಡ ಸಾಹಿತ್ಯ ಪರಿಷತ್ತಿನ ಕ್ರಿಯಾಶೀಲ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿಯವರು ಪರಿಷತ್ತಿಗೆ ಹೊಸತವನ್ನು ತಂದಿದ್ದು ಪ್ರಶಸ್ತಿಗಳ ಗೌರವವನ್ನು ಹೆಚ್ಚಿಸಿದ್ದಾರೆ ಎಂದು ಮುಕ್ತ ಕಂಠದಿಂದ ಪ್ರಶಂಸಿಸಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಆಶೋತ್ತರಗಳನ್ನು ಈಡೇರಿಸುವ ಸಾರ್ಥಕ ಕೆಲಸಗಳನ್ನು ಮಾಡಲಿ ಎಂದು ಹಾರೈಸಿದರು.

ಆಶಯ ಭಾಷಣವನ್ನು ಮಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ.ಮಹೇಶ ಜೋಶಿ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಸಾಂಸ್ಕೃತಿಕ ಪ್ರತಿನಿಧಿಯಾಗಿದ್ದು ಸಂಸ್ಕೃತಿಯ ಮೂಲಕ ಜಗತ್ತನ್ನೇ ಗೆಲ್ಲ ಬಹುದು ಎಂದು ಮಾದರಿಯಾಗಿ ತೋರಿಸಿ ಕೊಟ್ಟಿದೆ. ಈ ಸಂಸ್ಥೆಯ ಮಹತ್ವವನ್ನು ಗುರುತಿಸಿಯೇ ೨೧೦೦ಕ್ಕೂ ಹೆಚ್ಚು ದತ್ತಿ ಪ್ರಶಸ್ತಿಗಳು ಇಲ್ಲಿ ಸ್ಥಾಪನೆಗೊಂಡಿದ್ದು ಅದರಲ್ಲಿ ಕೆಲವು ಪ್ರಶಸ್ತಿಗಳು ಮೌಲ್ಯಯುತವಾಗಿವೆ. ಕೆಂಗಲ್ ಹನುಮಂತಯ್ಯ ಸಂಸ್ಕೃತಿ ದತ್ತಿ ಪ್ರಶಸ್ತಿ ಅದರಲ್ಲಿ ಮುಖ್ಯವಾದದ್ದು, ನ್ಯಾಯಮೂರ್ತಿಗಳಾಗಿ ವಸ್ತು ನಿಷ್ಟ ತೀರ್ಪನ್ನು ನೀಡುವ ಮೂಲಕ ವೃತ್ತಿಗೆ ಘನತೆ ಗೌರವಗಳನ್ನು ತಂದು ನೈತಿಕ ವಿಶಾಲ ತಳಹದಿಯ ಮೇಲೆ ಮೌಲ್ಯಾಧರಿತ ಸಮಾಜವನ್ನು ಕಟ್ಟುವಲ್ಲಿ ಅವಿಶ್ರಾಂತವಾಗಿ ಶ್ರಮಿಸುತ್ತಿರುವ ನ್ಯಾಯಮೂರ್ತಿ ಡಾ.ಶಿವರಾಜ ಪಾಟೀಲರ ಸೇವೆಯನ್ನು ಪರಿಗಣಿಸಿ ಕನ್ನಡ ಸಾಹಿತ್ಯ ಪರಿಷತ್ತು ೨೦೨೧ನೆಯ ಸಾಲಿನ ಶ್ರೀ ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ ನೀಡಿ ಗೌರವಿಸುತ್ತಿದೆ ಪ್ರಶಸ್ತಿ ಪ್ರದಾನ ಮಾಡುತ್ತಿರುವವರು ಮತ್ತು ಸ್ವೀಕರಿಸುತ್ತಿರುವವರ ನಡುವೆ ಅನೇಕ ಸಮಾನ ಗುಣಗಳಿವೆ. ಇಬ್ಬರೂ ಶ್ರೇಷ್ಠ ಮಾನವರು, ಕನ್ನಡ ಮಾಧ್ಯಮದಲ್ಲಿ ಓದಿ ಉನ್ನತ ಸ್ಥಾನಕ್ಕೇರಿ ಮಾತೃಭಾಷೆಯ ಹಿರಿಮೆಯನ್ನು ಎತ್ತಿ ಹಿಡಿದವರು ಎಂದು ಹೇಳಿ ಇಬ್ಬರ ಜೀವನದ ಸಮಾನ ಮಹತ್ವದ ಘಟನೆಗಳನ್ನು ಸ್ಮರಿಸಿ ಕೊಂಡರು. ಡಾ.ಸಿ.ಎನ್.ಆರ್.ರಾವ್ ಅವರಿಗೆ 'ಭಾರತ ರತ್ನ' ಪುರಸ್ಕಾರ ನೀಡಲ್ಪಟ್ಟಾಗ ನ್ಯಾಯಮೂರ್ತಿಗಳಾಗಿ ವಸ್ತು ನಿಷ್ಟ ತೀರ್ಪನ್ನು ನೀಡುವ ಮೂಲಕ ವೃತ್ತಿಗೆ ಘನತೆ ಗೌರವಗಳನ್ನು ತಂದರು. ನೈತಿಕ ವಿಶಾಲ ತಳಹದಿಯ ಮೇಲೆ ಮೌಲ್ಯಾಧರಿತ ಸಮಾಜವನ್ನು ಕಟ್ಟುವಲ್ಲಿ ಅವಿಶ್ರಾಂತವಾಗಿ ಶ್ರಮಿಸುತ್ತಿರುವ ನ್ಯಾಯಮೂರ್ತಿ ಡಾ.ಶಿವರಾಜ ಪಾಟೀಲರ ಸೇವೆಯನ್ನು ಪರಿಗಣಿಸಿ ಕನ್ನಡ ಸಾಹಿತ್ಯ ಪರಿಷತ್ತು ೨೦೨೧ನೆಯ ಸಾಲಿನ ಶ್ರೀ ಕೆಂಗಲ್ ಹನುಮಂತಯ್ಯ ದತ್ತಿ ಪ್ರಶಸ್ತಿ ನೀಡಿ ಗೌರವಿಸುತ್ತಿದೆದರ ಪ್ರಸಾರದ ಹೊಣೆ ತಮ್ಮದಾಗಿತ್ತು ಎನ್ನುವುದನ್ನು ಸ್ಮರಿಸಿ ಕೊಂಡ ನಾಡೋಜ ಡಾ.ಮಹೇಶ ಜೋಶಿಯವರು ಜಾಗತೀಕರಣ, ಉದಾರೀಕರಣ, ಖಾಸಗಿಕರಣ ಎಲ್ಲವೂ ಅಂತಿಮವಾಗಿ

ಮಾನವೀಕರಣದಲ್ಲಿ ಮುಕ್ತಾಯವಾದರೆ ಮಾತ್ರ ಸಾರ್ಥಕವಾಗುತ್ತದೆ ಎನ್ನುವ ಡಾ.ಶಿವರಾಜ ಪಾಟೀಲರ ಮಾತುಗಳನ್ನು ನೆನಪು ಮಾಡಿಕೊಂಡು ಸಂಸ್ಕೃತಿ ಸದಾ ಹರಿಯುವ ನದಿಯ ಹಾಗೆ ಅದರ ಹರಿವಿನ ಶುಭ್ರತೆಯನ್ನು ಕಾಪಾಡುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು. ಯಾವುದೇ ಅರ್ಜಿ-ಮರ್ಜಿ-ಶಿಫಾರಸ್ಸಿಗೆ ಅವಕಾಶವಿಲ್ಲದಂತೆ ಪಾರದರ್ಶಕವಾಗಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರಶಸ್ತಿಗಳ ಆಯ್ಕೆ ಮಾಡಲಾಗುವುದು ಎಂದು ನಾಡೋಜ ಡಾ.ಮಹೇಶ ಜೋಶಿಯವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ನ್ಯಾಯಮೂರ್ತಿ ಡಾ.ಶಿವರಾಜ ಪಾಟೀಲರು ಅತ್ಯಂತ ವಿನಯದಿಂದ ಈ ಪ್ರಶಸ್ತಿಯನ್ನು ಸ್ವೀಕರಿಸುತ್ತಿದ್ದೇನೆ, ಕನ್ನಡಿಗರೆಲ್ಲರ ಹೆಮ್ಮೆಯ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು ನೀಡುತ್ತಿರುವ ಈ ಪ್ರಶಸ್ತಿಯನ್ನು ಒಬ್ಬರು ತಮ್ಮ ಜೀವಿತಕಾಲದಲ್ಲಿ ಇಷ್ಟೊಂದು ಕಾರ್ಯವನ್ನು ಸಾಧಿಸ ಬಲ್ಲರೆ ಎಂದು ಅಚ್ಚರಿ ಪಡುವಷ್ಟು ಎತ್ತರವನ್ನು ತಲುಪಿರುವ ಭಾರತ ರತ್ನ ಡಾ.ಸಿ.ಎನ್.ಆರ್.ರಾವ್ ಅವರಿಂದ ಇಷ್ಟೊಂದು ಜನ ಗಣ್ಯರಿರುವ ಸಭೆಯಲ್ಲಿ ಸ್ವೀಕರಿಸುತ್ತಿರುವುದು ಸಾರ್ಥಕತೆಯ ಭಾವವನ್ನು ತಂದಿದೆ. ಈ ಪ್ರಶಸ್ತಿಯು ಕನ್ನಡದ ಕಟ್ಟಾಳು ಕೆಂಗಲ್ ಹನುಮಂತಯ್ಯನವರ ಹೆಸರಿನಲ್ಲಿದೆ. ಜವಾಹರ ಲಾಲ್ ನೆಹರು ಅವರ ಎದುರು ಎಲ್ಲರೂ ನಿಂತು ಮಾತಾಡಲು ಹೆದರುತ್ತಿದ್ದ ಕಾಲದಲ್ಲಿ ಅವರ ಎದುರು ಗಟ್ಟಿ ಧ್ವನಿಯಲ್ಲಿ ಕನ್ನಡಿಗರ ಬೇಡಿಕೆಗಳನ್ನು ಮಂಡಿಸುತ್ತಿದ್ದ ಕೆಂಗಲ್ ಅವರು ಕನ್ನಡಿಗರ ಹೆಮ್ಮೆಯಾದ ವಿಧಾನ ಸೌಧವನ್ನು ಕಟ್ಟಿದರು. ರೈಲ್ವೆ ಸಚಿವರಾಗಿ ರೈಲುಗಳು ಸಮಯಕ್ಕೆ ಸರಿಯಾಗಿ ಬರುವಂತೆ ಮಾಡಿದವರು. ಅವರ ಹೆಸರಿನಲ್ಲಿರುವ ಪ್ರಶಸ್ತಿಗೆ ಸಹಜವಾಗಿಯೇ ಮಹತ್ವವಿದೆ. ಪ್ರಶಸ್ತಿಗಳಿಗೆ ಪರಿಶ್ರಮ ಪಡುವಂತಾಗಬಾರದು ಅವು ಸಹಜವಾಗಿಯೇ ಬರಬೇಕು, ಹೀಗೆ ಬಂದ ಪ್ರಶಸ್ತಿಗೆ ಘನತೆ ಇರುತ್ತದೆ. ಇಂತಹ ಮಹತ್ವದ ಪ್ರಶಸ್ತಿಯನ್ನು ವಿನಯದಿಂದ ಸ್ವೀಕರಿಸಿದ್ದೇನೆ ಎಂದು ಹೇಳಿ ಸಾಧನೆ ಮಾತಾಡ ಬೇಕೆ ಹೊರತು ಮಾತಾಡುವುದೇ ಸಾಧನೆಯಾಗ ಬಾರದು ಎಂದು ಕಿವಿ ಮಾತನ್ನು ಹೇಳಿದರು

**ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷರಾದ ಪಟೇಲ್ ಪಾಂಡು ಅವರು ಕಾರ್ಯಕ್ರಮವನ್ನು ನಿರೂಪಣೆ ಮಾಡಿದರೆ ಗೌರವ ಕಾರ್ಯದರ್ಶಿಗಳಾದ ಡಾ.ಪದ್ಮಿನಿ ನಾಗರಾಜು ಸ್ವಾಗತ ಕೋರಿದರು. ಇನ್ನೊಬ್ಬ ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ ವಂದನಾರ್ಪಣೆ ಮಾಡಿದರು. ನಾಡೋಜ ಡಾ.ಹಂಪ ನಾಗರಾಜಯ್ಯ, ಡಾ.ದೊಡ್ಡರಂಗೇಗೌಡ ಸೇರಿದಂತೆ ಅನೇಕ ಬರಹಗಾರರು, ಹಾಲಿ ಮತ್ತು ನಿವೃತ್ತ ನ್ಯಾಯಮೂರ್ತಿಗಳು, ಆಡಳಿತಗಾರರು ಸೇರಿ ಅನೇಕ ಪ್ರಮುಖರು ಕಾರ್ಯಕ್ರಮದಲ್ಲಿ ಹಾಜರಿದ್ದು ಶೋಭೆಯನ್ನು ತಂದರು.**

**ಎನ್.ಎಸ್.ಶ್ರೀಧರ ಮೂರ್ತಿ**

**ಸಂಚಾಲಕರು, ಪ್ರಕಟಣಾ ವಿಭಾಗ**

**ಕನ್ನಡ ಸಾಹಿತ್ಯ ಪರಿಷತ್ತು**